<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.</u>

ದಿನಾಂಕ 06 ನೇ ಫೆಬ್ರವರಿ 2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು</u> : ಪ್ರತಿವಾದಿ ಪರ ಶ್ರೀ ಕೆ. ಪಿ. ಬಿ. ವಕೀಲರಿಂದಃ-

1. ನಾನು 10 ನೇ ತರಗತಿ ತನಕ ವಿಧ್ಯಾಭ್ಯಾಸ ಮಾಡಿದ್ದೇನೆ. ನನಗೆ ಆಂಗ್ಲ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ. ಒಂದನೇ ವಾದಿ ನನ್ನ ತಾಯಿ ಎಂದರೆ ಸರಿ. ಒಂದನೇ ವಾದಿ ನನ್ನ ತಾಯಿ ದಿ. 14.08.2021 ರಂದು ಮೃತರಾಗಿರುತ್ತಾರೆ. ನನಗೆ ಒಬ್ಬ ಸಹೋದರ ಇದ್ದಾರೆ ಅವರ ಹೆಸರು ಜಾನ್ ಜೋಶವ್ರೋ. ನನಗೆ ಒಬ್ಬ ಸಹೋದರಿ ಇದ್ದಾರೆ ಅವರ ಹೆಸರು ಐಲಿ. ನನ್ನ ಸಹೋದರಿಗೆ ಮದುವೆ ಆಗಿದೆ, ಅವರು ಪೂಚಕಲ್ಲು ಗ್ರಾಮದಲ್ಲಿ ಸಂಸಾರ ಸಮೇತ ವಾಸವಿದ್ದಾರೆ. ನನ್ನ ಸಹೋದರ ಬೆಂಗಳೂರಿನಲ್ಲಿ ವಾಸವಿದ್ದಾರೆ. ದಾವಾ ಆಸ್ತಿಯ ಜಮಾಬಂಧಿ ಒಂದನೇ ಪ್ರತಿವಾದಿಯ ತಂದೆ ಹೆಸರಿಗೆ ಬರುತ್ತಿದೆ ಎಂದರೆ ಸರಿ. ಈಗ ದಾವಾ ಆಸ್ತಿಯ ಪಹಣಿ ಪತ್ರಿಕೆ ಒಂದನೇ ಪ್ರತಿವಾದಿಯ ಹೆಸರಿಗೆ ಇದೆ ಎಂದರೆ ಸರಿ.

2. 1958 ರ ದಾವಾ ಆಸ್ತಿಯ ಜಮಾಬಂಧಿಯಲ್ಲಿ ಒಂದನೇ ಪ್ರತಿವಾದಿಯ ತಂದೆಯಾದ ವಿಲ್ಲಿ ಡಿಕ್ರೋಸ್ ರವರ ಹೆಸರು ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಸದರಿಯವರು ದಾವಾ ಆಸ್ತಿ ಕ್ರಯಕ್ಕೆಪಡೆದಿರುವ ಕಾರಣ ಅವರ ಹೆಸರಿಗೆ ಬಂತು ಎಂದರೆ ಸಾಕ್ಷಿಯು ನನ್ನ ತಂದೆ ಹಾಗೂ ವಿಲ್ಲಿ ಡಿಕ್ರೋಸ್ ರವರು ದಾವಾ ಆಸ್ತಿಯನ್ನು ಜಂಟಿಯಾಗಿ ಕ್ರಯಕ್ಕೆ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ.. ಈ ಬಗ್ಗೆ ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಈ ಕುರಿತು ನನ್ನ ತಂದೆ ಯಾವ ದಾಖಲೆಯನ್ನು ತೋರಿಸಿರುವುದಿಲ್ಲ.

3. ನನ್ನ ತಂದೆ ಹಾಗೂ ಒಂದನೇ ಪ್ರತಿವಾದಿಯ ತಂದೆ ಕುಟ್ಟದಲ್ಲಿರುವ ಫೈತ್ ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದರು. ಈ ವಿಚಾರ ನನ್ನ ತಂದೆ ಹೇಳಿದ ಮೇರೆಗೆ ನನಗೆ ತಿಳಿದು ಬಂತು. ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಇಬ್ಬರಿಗೂ ಮದುವೆ ಆಗಿರಲಿಲ್ಲ ಎಂದರೆ ಸರಿ. ಒಂದನೇ ಪ್ರತಿವಾದಿಯ ತಂದೆ ವಿಲ್ಲಿ ಡಿಕ್ರೋಸ್ ರವರು ಮನೆ ಕಟ್ಟುವ ಕಾಂಟ್ರಾಕ್ಟ್ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆ Mechanical ಹಾಗೂ Driver ಕೆಲಸ ಮಾಡುತ್ತಿದ್ದರು. ಒಂದನೇ ಪ್ರತಿವಾದಿಯ ತಂದೆ ವಿಲ್ಲಿ ಡಿಕ್ರೋಸ್ ರವರು ನನ್ನ ತಂದೆಯ ತಂಗಿಯನ್ನು ಮದುವೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಎರಡನೇ ಪ್ರತಿವಾದಿಯ ನನ್ನ ತಂದೆಯ ತಂಗಿ /

ಅತ್ತೆ ಎಂದರೆ ಸರಿ. ಎರಡನೇ ಪ್ರತಿವಾದಿ ಮದುವೆ ಆದ ನಂತರ ಅವರು ಕುಟುಂಬ ಸಮೇತ ದಾವಾ ಆಸ್ತಿಯಲ್ಲಿ ಇರುವ ಮನೆಯಲ್ಲಿ 2015 ರ ವರೆಗೂ ವಾಸವಿದ್ದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಈ ವಿಚಾರ ನನಗೆ ಚೆನ್ನಾಗಿ ಗೊತ್ತಿದ್ದರೂ ವಿಚಾರ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ದಾವಾ ಸ್ವತ್ತನ್ನು ಕ್ರಯಕ್ಕೆಪಡೆದಾಗ ಅಲ್ಲಿ ಕಾಫಿ ತೋಟ ಮತ್ತು ಮನೆ ಇತ್ತು ಎಂದರೆ ಸಾಕ್ಷಿಯು ಅಲ್ಲಿ ನನ್ನ ತಂದೆ ಕಾಫಿ ತೋಟ ಮಾಡಿದ್ದು ಹಾಗೂ ಮನೆಯನ್ನು ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಲಾಗಿ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-

(ಸಾಕ್ಷಿಯವರ ಸಹಿ) ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.